## Annexure XI

By R.P.AD

ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಯವರ ಕಛೇರಿ, ಉಡುಪಿ ಜಿಲ್ಲೆ, ಉಡುಪಿ – 576 101.**

ನಂಬ್ರ/ ಎಂಎಜಿ(2) /ಸಿಆರ್/859/09-10 ಸಿ/ಕಂ.ನಂ.30282 /ದಿನಾಂಕ 16-03-2011

ರಿಗೆ,

**ಅತಿ ಜರೂರು**

ಸೀನಿಯರ್ ಜನರಲ್ ಮೇನೇಜರ್ (ಯೋಜನೆಗಳು)
ಉಡುಪಿ ಪವರ್ ಕಾರ್ಪೋರೇಷನ್ ಲಿ,
ಕೊಳಚೂರು. ಎಲ್ಲೂರು ಗ್ರಾಮ. ಪಿಲಾರು ಅಂಚೆ.
ಉಡುಪಿ ತಾಲೂಕು.

ಮಾನ್ಯರೇ,

ವಿಷಯ:ಉಡುಪಿ ಪವರ್ ಕಾರ್ಪೋರೇಷನ್ ಘಟಕದ ಪೈಪ್ ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಬಗ್ಗೆ ದಿನಾಂಕ 23-02-2010 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗೆ ಸಂಬಂಧಿಸಿ ಕ್ರಮ ತೆಗೆದುಕೊಳ್ಳುವ ಕುರಿತು

ಉಲ್ಲೇಖ:1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಮುಮಕಾ:ಆಕಾ:239/2010 ದಿನಾಂಕ 23-06-2010
2.ಮೀನುಗಾರಿಕೆ ನಿರ್ದೇಶಕರು,ಬೆಂಗಳೂರು ರವರ ಪತ್ರ ಸಂಖ್ಯೆ ಆರ್.ಎಸ್.ಹೆಚ್.:33: 2009-10 ದಿನಾಂಕ 01-07-2010
3. ತಹಶಿಲ್ದಾರರು ಉಡುಪಿ ತಾಲೂಕು ಇವರ ಪತ್ರ ಸಂಖ್ಯೆ ಎಡಿಎಂ:ಸಿಆರ್:42/10-11 ದಿನಾಂಕ 10-1-2011 ಮತ್ತು 21-02-2011

**

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ತಮ್ಮ ಗಮನವನ್ನು ಸೆಳೆಯಲಾಗಿದೆ.. ಉಲ್ಲೇಖ 1ರಂತೆ ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ತೆಗದುಕೊಂಡಿರುವ ನಿರ್ಣಯದಂತೆ ಕೈರಂಪಣಿ ಫಂಡುಗಳಲ್ಲಿ ದುಡಿಯುತ್ತಿರುವ ಸಂತ್ರಸ್ಥ 360 ಮೀನುಗಾರರ ಕುಟುಂಬಗಳಿಗೆ ತಲಾ 2.00 ಲಕ್ಷದಂತೆ ಪರಿಹಾರವನ್ನು ಉಡುಪಿ ಪವರ್ ಕಾರ್ಪೋರೇಷನ್ ಕಂಪೆನಿಯವರು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿರುವಂತೆ ಸಂತ್ರಸ್ಥ ಮೀನುಗಾರರ ಕುಟುಂಬದವರಿಗೆ ಸದರಿ ಕಂಪೆನಿಯವರಿಂದ ಪರಿಹಾರಧನ ಪಾವತಿಸುವರೇ ತಹಶಿಲ್ದಾರರು ಉಡುಪಿ ತಾಲ್ಲೂಕು ಮತ್ತು ಮೀನುಗಾರಿಕಾ ಸಹಾಯಕ ನಿರ್ದೇಶಕರು ಉಡುಪಿ ಇವರುಗಳು ಒಟ್ಟು 302 ಕುಟುಂಬಗಳನ್ನು ಗುರುತಿಸಿ ಅಂತಹ ಕುಟುಂಬದ ಪಟ್ಟಿಯನ್ನು ಈ ಕಛೇರಿಗೆ ಕಳುಹಿಸಿಕೊಟ್ಟಿರುತ್ತಾರೆ. ಆದುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸದರಿ ಮೀನುಗಾರರ ಕುಟುಂಬಗಳಿಗೆ ಪರಿಹಾರ ಧನವನ್ನು ಯು.ಪಿ.ಸಿ.ಎಲ್ ಕಂಪೆನಿಯಿಂದ ವಿತರಿಸಬೇಕಾಗಿದ್ದು ಪರಿಹಾರದ ಮೊತ್ತವನ್ನು ತಹಶೀಲ್ದಾರರಿಗೆ ಕೂಡಲೇ ಬಿಡುಗಡೆಗೊಳಿಸುವಂತೆ ಕೋರಿದೆ. ಈ ವಿಷಯದಲ್ಲಿ ತಹಶೀಲ್ದಾರರು ತಮ್ಮ ವೈಯುಕ್ತಿಕ ಗಮನಹರಿಸಿ ಪರಿಹಾರದ ಮೊತ್ತವನ್ನು ಕಂಪೆನಿಯಿಂದ ಪಡೆದುಕೊಂಡು ಸದರಿ ಮೀನುಗಾರರ ಕುಟುಂಬಕ್ಕೆ ವಿತರಣೆ ಮಾಡಿ ಅದರ ಸ್ವೀಕೃತಿಯನ್ನು ದ್ವಿಪ್ರತಿಗಳಲ್ಲಿ ಪಡೆದು ಈ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ
(signature)
ಜಿಲ್ಲಾಧಿಕಾರಿ
ಉಡುಪಿ ಜಿಲ್ಲೆ,ಉಡುಪಿ

ಪ್ರತಿ/ ತಹಶೀಲ್ದಾರರು, ಉಡುಪಿ ತಾಲೂಕು ಇವರಿಗೆ ಮಾಹಿತಿ ಹಾಗೂ ಜರೂರು ಸೂಕ್ತ ಕ್ರಮಕ್ಕಾಗಿ

ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)

ಸಂಖ್ಯೆ:ಆರ್.ಎಸ್.ಹೆಚ್/33/2009–10

ಮೀನುಗಾರಿಕೆ ನಿರ್ದೇಶನಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-1, ದಿನಾಂಕ:25–06–2010.

ಇವರಿಗೆ:

ಶ್ರೀ ಲಾಲಾಜಿ ಮೆಂಡನ್,
ಮಾನ್ಯ ವಿಧಾನ ಸಭಾ ಸದಸ್ಯರು,
ಕಾಪು ವಿದಾನ ಸಭಾ ಕ್ಷೇತ್ರ,
ಕಾಪು, ಉಡುಪಿ ಜಿಲ್ಲೆ.

ಮಾನ್ಯರೆ,

ವಿಷಯ: ದಿನಾಂಕ:23–02–2010ರಂದು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಘಟಕದ ಪೈಪ್‌ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಕುರಿತು ಶ್ರೀ ಯಡ್ಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳು.

ಉಲ್ಲೇಖ: 1)ಮಾನ್ಯ ಮುಖ್ಯಮಂತ್ರಿಯವರು ವಿಶೇಷ ಕರ್ತವ್ಯಾಧಿಕಾರಿಯವರ ಸಭಾ ಸೂಚನಾ ಪತ್ರ ಸಂಖ್ಯೆ ಮುಮ/55 /ಎಕ ಆ/10, ದಿ:1–2–2010,
2)ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರ ಪತ್ರ ಸಂಖ್ಯೆ:ಮುಮಕಾ/ಆಕಾ/ 239/2010, ದಿ:23–06–2010.

---

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:23–02–2010ರಂದು ವಿಧಾನ ಸೌಧದ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಉಡುಪಿ ಪವರ್ ಕಾರ್ಪೋರೇಷನ್, ಉಷ್ಣ ವಿದ್ಯುತ್ ಘಟಕದ ಪೈಪ್‌ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಕುರಿತಂತೆ ಕರೆಯಲಾಗಿದ್ದ ಸಭೆಯ ನಡವಳಿಗಳನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

ಅಡಕ:1.

ಮೀನುಗಾರಿಕೆ ನಿರ್ದೇಶಕರು.

**ದಿನಾಂಕ:23-02-2010ರಂದು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಘಟಕದ ಪೈಪ್‌ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಕುರಿತು ಶ್ರೀ ಯಡ್ಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದವರ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.**

ಡಾ: ವಿ.ಎಸ್.ಆಚಾರ್ಯ, ಮಾನ್ಯ ಗೃಹ ಸಚಿವರು ಸಭೆಗೆ ಎಲ್ಲರನ್ನೂ ಸ್ವಾಗತಿಸುತ್ತಾ, ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ವಿದ್ಯುತ್ ಘಟಕ ಸ್ಥಾಪನೆಯಿಂದ ಸ್ಥಳೀಯ ಮೀನುಗಾರರಿಗೆ ಆಗುವ ತೊಂದರೆಗಳ ಬಗ್ಗೆ ವಿವರಿಸಿ ಕಂಪನಿಯು ಸೂಕ್ತ ಪರಿಹಾರ ನೀಡುವುದು ಅವಶ್ಯಕವೆಂದು ಅಭಿಪ್ರಾಯ ಪಟ್ಟರು.

ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ವಿದ್ಯುತ್ ಘಟಕದ ಪೈಪ್‌ಲೈನ್‌ನ್ನು ಸಮುದ್ರದ ಒಂದು ಕಿ.ಮೀ ಒಳಗೆ ಮತ್ತು 8-10 ಮೀಟರ್ ಆಳದಲ್ಲಿ ಬಿಡಲಾಗುವುದೆಂದೂ ನೀರಿನ ಉಷ್ಣತೆಯಲ್ಲಿ ಕೇವಲ 0.03 ಸೆಂಟಿಗ್ರೇಡ್ ಹೆಚ್ಚಾಗಲಿದ್ದು, ಡಿಫ್ಯೂಸರ್‌ಗಳನ್ನು ಅಳವಡಿಸುವುದರಿಂದ ಕೂಡಲೇ ಸಮಿಶ್ರಣಗೊಳ್ಳುತ್ತದೆಯೆಂದು ಕಂಪನಿಯ ಶ್ರೀ ಕಿಶೋರ್ ಆಳ್ವರವರು ಸಭೆಗೆ ತಿಳಿಸಿದರು. ಈ ಬಗ್ಗೆ ವಿವರವಾದ ಅಧ್ಯಯನ ಕೈಗೊಂಡ NIO ಗೋವಾ ತಜ್ಞರಾದ ಡಾ: ಆನಂದರವರು ಪೈಪ್‌ಲೈನನ್ನು ಸಮುದ್ರದ ಅಡಿಯಲ್ಲಿ ಹಾಕುತ್ತಿರುವುದರಿಂದ ಮತ್ತು ಬಿಸಿ ನೀರನ್ನು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರಿಕೆಗೆ ಯಾವುದೇ ತೊಂದರೆ ಉಂಟಾಗದೆಂದು ತಿಳಿಸಿದ್ದರು. ಮೀನುಗಳ ಸಾಂದ್ರತೆಯನ್ನು ಹೆಚ್ಚಿಸಲು ಕಂಪನಿಯು ಎಫ್‌ಎಜಿ ಮತ್ತು Artificial Reef ಗಳನ್ನು ನಿರ್ಮಿಸಿ ಹೆಚ್ಚು ಮೀನು ದೊರೆಯುವಂತೆ ಮೀನುಗಾರಿಕೆ ಇಲಾಖೆ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಪರಿಸರವಾದಿ ಡಾ: ಅಶೋಕ್ ಕುಂದಾಪುರ್‌ರವರು ಸದರಿ ಉಷ್ಣ ಸ್ಥಾವರದಿಂದ ಮೀನುಗಾರರಿಗೆ ಆಗುವ ತೊಂದರೆಗಳ ಬಗ್ಗೆ ಮನದಟ್ಟು ಮಾಡಿದರು. ಮೊಗವೀರ ಯುವ ಸಂಘಟನೆಯ ಗೌರವ ಅಧ್ಯಕ್ಷರಾದ ಡಾ: ಜಿ.ಶಂಕರ್‌ರವರು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ಉಷ್ಣ ವಿದ್ಯುತ್ ಘಟಕದವರು ಪೈಪ್‌ಲೈನ್ ಅನ್ನು ಸಮುದ್ರದಲ್ಲಿ ಅಳವಡಿಸುವುದರಿಂದ 3 ಗ್ರಾಮಗಳ 6 ಕೈರಂಪಣಿ ಫಂಡುಗಳಲ್ಲಿ ದುಡಿಯುವ ಮೀನುಗಾರರ ಕುಟುಂಬಗಳಿಗೆ ಜೀವನೋಪಾಯದ ತೊಂದರೆ ಉಂಟಾಗುವ ಬಗ್ಗೆ ಸಭೆಗೆ ವಿವರಿಸಿದರು. ಕಾಪು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಲಾಲಾಜಿ ಮೆಂಡನ್‌ರವರು ಮತ್ತು ಜಿಲ್ಲಾಧ್ಯಕ್ಷರು ಮೊಗವೀರ ಯುವ ಸಂಘಟನೆ, ಉಡುಪಿ ಮತ್ತು ಕೈರಂಪಣಿ ಫಂಡುಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮೀನುಗಾರರಿಗೆ ಉಂಟಾಗುವ ತೊಂದರೆಗಳ ಬಗ್ಗೆ ವಿಷದೀಕರಿಸಿದರು. 6 ಕೈರಂಪಣಿ ಫಂಡುಗಳ 360 ಮೀನುಗಾರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕುವುದರಿಂದ ಪ್ರತಿಯೊಂದು ಕುಟುಂಬಕ್ಕೆ ತಲಾ ರೂ.5.00 ಲಕ್ಷದಂತೆ ಪರಿಹಾರ ದೊರಕಿಸಿಕೊಡಬೇಕೆಂದು ಮತ್ತು ಪ್ರತಿ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗವನ್ನು ಸದರಿ ಕಂಪನಿಯು ನೀಡುವಂತೆ ಸಭೆಯಲ್ಲಿ ಒತ್ತಾಯಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಶಾಸಕರು ಮತ್ತು ಮೀನುಗಾರರ ಮುಖಂಡರ ಅಭಿಪ್ರಾಯಗಳನ್ನು ಆಲಿಸಿ ಮಾನ್ಯ ಗೃಹ ಸಚಿವರೊಂದಿಗೆ ಚರ್ಚಿಸಿ ಸಂತ್ರಸ್ಥಗೊಳ್ಳುವ 360 ಕೈರಂಪಣಿ ಮೀನುಗಾರ ಕುಟುಂಬಗಳಿಗೆ ತಲಾ ರೂ.2.00 ಲಕ್ಷದಂತೆ ಪರಿಹಾರವನ್ನು ಮತ್ತು ಪ್ರತಿಯೊಂದು ಕುಟುಂಬದಿಂದ ಒರ್ವರಿಗೆ ತಾಂತ್ರಿಕೇತರ ಕೆಲಸವನ್ನು ಉಡುಪಿ ಪವರ್ ಕಾರ್ಪೋರೇಷನ್ ನೀಡಬೇಕೆಂದು ಆದೇಶಿಸಿದರು.

ಉಷ್ಣ ವಿದ್ಯುತ್ ಸ್ಥಾವರದ ಹಾರುಬೂದಿ ಶೇಖರಣೆಯಿಂದ ಸ್ಥಳೀಯ ಜನರ ಆರೋಗ್ಯದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಕಾರ್ಯಾನೆ ಪ್ರಾರಂಭಿಸುವ ಮೊದಲು ವೈದ್ಯಕೀಯ ಸಮೀಕ್ಷೆಯೊಂದನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಉಡುಪಿ ಇವರಿಗೆ ಸೂಚಿಸಲಾಯಿತು. ನಂತರ ಪ್ರತಿ 2 ವರ್ಷಕ್ಕೊಮ್ಮೆ ಸದರಿ ವೈದ್ಯಕೀಯ ಸಮೀಕ್ಷೆಯನ್ನು ಪುನರ್ ಕೈಗೊಂಡು ಜನರ ಆರೋಗ್ಯದ ಮೇಲೆ ಏನಾದರೂ ಪರಿಣಾಮ ಉಂಟಾಗುವ ಸೂಚನೆ ಕಂಡು ಬಂದಲ್ಲಿ ಸೂಕ್ತ ಪರಿಹಾರ ವ್ಯವಸ್ಥೆ ಕೈಗೊಳ್ಳತಕ್ಕದೆಂದು ತೀರ್ಮಾನಿಸಲಾಯಿತು.

ಉಷ್ಣ ವಿದ್ಯುತ್ ಸ್ಥಾವರಕ್ಕೆ ಸಮುದ್ರದಿಂದ ತೆಗೆದುಕೊಳ್ಳುವ ಮತ್ತು ಬಿಡುವ ನೀರು ಮತ್ತು ಇತರ ಕಲ್ಮಶಗಳಿಂದ ಪರಿಸರ ಮತ್ತು ಮೀನುಗಾರಿಕೆಗೆ ತೊಂದರೆ ಉಂಟಾಗದಂತೆ ತಜ್ಞ ಸಂಸ್ಥೆಯಿಂದ ನಿಯತಕಾಲಿಕವಾಗಿ ಅಧ್ಯಯನ ಕೈಗೊಳ್ಳುವಂತೆಯೂ ಮತ್ತು ಈ ಕ್ರಿಯೆಯಲ್ಲಿ ಸ್ಥಳೀಯ ಮೀನುಗಾರರ ಮುಖಂಡರನ್ನು ಸೇರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

ಸದರಿ ಕಂಪನಿಯಿಂದ ಸ್ಥಳೀಯರಿಗೆ, ಮೀನುಗಾರರಿಗೆ ಮತ್ತು ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆ ಉಂಟಾದಲ್ಲಿ ಮತ್ತು ಅವರ ಜೀವನೋಪಾಯಕ್ಕೆ ಕುತ್ತು ಉಂಟಾದಲ್ಲಿ ಸೂಕ್ತ ಪರಿಹಾರ ನೀಡುವ ಬಗ್ಗೆ ಕಂದಾಯ ಇಲಾಖೆಯು ಕೂಡಲೇ ಸ್ವವಿವರವಾದ ಸಮೀಕ್ಷೆಯನ್ನು ಕೈಗೊಳ್ಳಬೇಕೆಂದು ಮತ್ತು ತೊಂದರೆ ಕಂಡು ಬಂದಲ್ಲಿ ಸೂಕ್ತ ಪರಿಹಾರ ಮತ್ತು ಪುನರ್ ವಸತಿ ವ್ಯವಸ್ಥೆ ಕಲ್ಪಿಸತಕ್ಕದೆಂದು ನಿರ್ಣಯಿಸಲಾಯಿತು.

(ಬಿ.ಎಸ್.ಯಡ್ಯೂರಪ್ಪ)
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ.

ಮುಖ್ಯಮಂತ್ರಿಯವರ ಸಚಿವಾಲಯ

**CHIEF MINISTER'S SECRETARIAT**

ವಿಧಾನ ಸೌಧ, ಬೆಂಗಳೂರು
VIDHANA SOUDHA, BANGALORE
PIN : 560 001

ಕ್ರಮಾಂಕ: 3605
No.: ಮುಮಕಾ/ಆಕಾ/239 /2010

ದಿನಾಂಕ
DATED 23-06-2010

ನಿರ್ದೇಶಕರು
ಮೀನುಗಾರಿಕೆ ನಿರ್ದೇಶನಾಲಯ
ಬೆಂಗಳೂರು

25 JUN 2010

ಮಾನ್ಯರೆ,

ದಿನಾಂಕ 23-02-2010 ರಂದು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಘಟಕದ ಪೈಪ್‌ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಕುರಿತು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿದ್ದು, ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ

ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ
ಆಪ್ತ ಕಾರ್ಯದರ್ಶಿ

## ಅನುಬಂಧ

**ದಿನಾಂಕ:23-02-2010ರಂದು ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಉಷ್ಣ ವಿದ್ಯುತ್ ಘಟಕದ ಪೈಪ್‌ಲೈನ್ ಸಮುದ್ರಕ್ಕೆ ಜೋಡಿಸುವುದರಿಂದ ಮತ್ತು ಅದರ ಬಿಸಿ ನೀರು ಸಮುದ್ರಕ್ಕೆ ಬಿಡುವುದರಿಂದ ಮೀನುಗಾರರಿಗೆ ಆಗುವ ಹಾನಿಯ ಕುರಿತು ಶ್ರೀ ಯಡ್ಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಗೆ**

**ಹಾಜರಾದವರ ಪಟ್ಟಿ**

1) ಡಾ: ವಿ.ಎಸ್.ಆಚಾರ್ಯ,
ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು
ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು.

2) ಶ್ರೀ ಲಾಲಾಜಿಮೆಂಡನ್,
ಮಾನ್ಯ ವಿಧಾನ ಸಭಾ ಸದಸ್ಯರು,
ಕಾಪು ವಿಧಾನ ಸಭಾ ಕ್ಷೇತ್ರ

3) ಡಾ: ರಾಜು,
ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು.

4) ಶ್ರೀ ಕನ್ವರ್‌ಪಾಲ್
ಕಾರ್ಯದರ್ಶಿ
ಜೀವಿಶಾಸ್ತ್ರ ಮತ್ತು ಪರಿಸರ
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ.

5) ಶ್ರೀಮತಿ ಹೇಮಲತಾ,
ಜಿಲ್ಲಾದಿಕಾರಿಗಳು,
ಉಡುಪಿ ಜಿಲ್ಲೆ, ಉಡುಪಿ.

6) ಶ್ರೀ ಹೆಚ್.ಎಸ್.ವೀರಪ್ಪಗೌಡ,
ನಿರ್ದೇಶಕರು,
ಮೀನುಗಾರಿಕೆ ಇಲಾಖೆ,
ಬೆಂಗಳೂರು.

7) ಶ್ರೀ ಕಿಶೋರ್‌ಆಳ್ವ,
ಉಡುಪಿ ಪವರ್ ಕಾರ್ಪೋರೇಷನ್ ನಿಯಮಿತ
ಉಡುಪಿ.

8) ಡಾ: ಆನಂದ್,
ಎನ್.ಐ.ಓ, ಗೋವಾ.

9) ಡಾ: ಜಿ.ಶಂಕರ್,
ಗೌರವಾಧ್ಯಕ್ಷರು,
ಮೊಗವೀರ ಯುವ ಸಂಘಟನೆ, ಉಡುಪಿ.

10) ಡಾ: ಅಶೋಕ್ ಕುಂದಾಪುರ್,
ಪರಿಸರವಾದಿ,
ಉಡುಪಿ.

11) ಶ್ರೀ ಸತೀಶ್ ಅಮೀನ್,
ಸ್ಥಾಪಕಾಧ್ಯಕ್ಷರು,
ಮೊಗವೀರ ಯುವ ಸಂಘಟನೆ, ಉಡುಪಿ.

12) ಶ್ರೀ ಸತೀಶ್ ನಾಯಕ್,
ಜಿಲ್ಲಾಧ್ಯಕ್ಷರು,
ಮೊಗವೀರ ಯುವ ಸಂಘಟನೆ, ಉಡುಪಿ.

13) ಶ್ರೀ ಕೇಶವಕುಂದರ್,
ಅಧ್ಯಕ್ಷರು,
ದಕ್ಷಿಣ ಕನ್ನಡ ಮೊಗವೀರ ಮಹಾಜನಸಂಘ, ಉಚ್ಚಿಲ.

14) ಅಧ್ಯಕ್ಷರು ಮತ್ತು ಪದಾಧಿಕಾರಿಗಳು,
ಆರು ಕೈರಂಪಣಿ ಫಂಡುಗಳು.